ವಿಷಯ : ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಹೆಬ್ಬಾಳದಿಂದ-ಗುಡ್ಡದಹಳ್ಳಿ, ಚೋಳನಾಯಕನ ಹಳ್ಳಿ ಮತ್ತು ವಿಶ್ವನಾಥ ನಾಗೇನಹಳ್ಳಿ ರಸ್ತೆ ಡಾಂಬರು ಮಾಡುವ ಕುರಿತು.

ಪ್ರಶ್ನೆ : 101(313) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ಉತ್ತರ ತಾಲ್ಲೂಕಿನ ಹೆಬ್ಬಾಳದಿಂದ ಗುಡ್ಡದಹಳ್ಳಿ, ಚೋಳನಾಯಕನ ಹಳ್ಳಿ ಮತ್ತು ವಿಶ್ವನಾಥ ನಾಗೇನಹಳ್ಳಿಗೆ ಹೋಗುವ ರಸ್ತೆಯನ್ನು ಡಾಂಬರು ಮಾಡಲು ಮಂಜೂರಾತಿ ನೀಡಲಾಗಿದ್ದು ಕಾಮಗಾರಿಯನ್ನು ನಿರ್ವಹಣೆ ಮಾಡದಿರುವುದು ನಿಜವೇ ;

ಆ) ಈಗಾಗಲೇ ಮಂಜೂರಾತಿ ನೀಡಿರುವ ಕಾಮಗಾರಿಯನ್ನು ನಿರ್ವಹಣೆ ಮಾಡುವುದರಲ್ಲಿ ವಿಳಂಬವಾಗಲು ಕಾರಣವೇನು ;

ಇ) ಇನ್ನು ಮುಂದೆ ವಿಳಂಬವಾಗದಂತೆ ಕಾಮಗಾರಿಯನ್ನು ನಿರ್ವಹಣೆ ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದೇ ;

ಈ) ರಾಷ್ಟ್ರೀಯ ಹೆದ್ದಾರಿ 7 ರಿಂದ (ಹೆಬ್ಬಾಳ್‌ನಿಂದ) ಡಾ. ಬಿ. ಆರ್, ಅಂಬೇಡ್ಕರ್ ವೈದ್ಯಕೀಯ ಕಾಲೇಜಿನವರೆಗೆ ಇರುವ ರಸ್ತೆಯನ್ನು (ಚೋಳನಾಯಕನ ಹಳ್ಳಿ ಮಾರ್ಗವಾಗಿ) ಜಲ್ಲಿ ರಸ್ತೆಯನ್ನಾಗಿ ಮಾಡಲು ಯಾವುದಾದರೂ ಅರ್ಜಿಗಳು ಬಂದಿವೆಯೇ ;

ಉ) ಹಾಗಿದ್ದಲ್ಲಿ ಹೆಬ್ಬಾಳ್‌ನಿಂದ– ಡಾ. ಬಿ. ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜಿನವರೆಗೆ ಇರುವ ರಸ್ತೆಗೆ ಜಲ್ಲಿ ಹಾಕಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೆಬ್ಬಾಳದಿಂದ ಗುಡ್ಡದ ಹಳ್ಳಿವರೆಗಿನ ರಸ್ತೆ ಈಗಾಗಲೇ ಡಾಂಬರು ರಸ್ತೆಯಾಗಿದೆ. ಗುಡ್ಡದ ಹಳ್ಳಿಯಿಂದ ಚೋಳನಾಯಕನಹಳ್ಳಿ ಮತ್ತು ಗುಡ್ಡದ ಹಳ್ಳಿಯಿಂದ ವಿಶ್ವನಾಥ ನಾಗೇನಹಳ್ಳಿ ರಸ್ತೆಗಳಿಗೆ ಡಾಂಬರು ಹಾಕಲು ಮಂಜೂರಾತಿ ನೀಡಲಾಗಿದೆ ಹಾಗೂ ಗುತ್ತಿಗೆದಾರರನ್ನು ಗೊತ್ತು ಪಡಿಸಲಾಗಿದ್ದು, ಆ ಗುತ್ತಿಗೆದಾರರು ಕಾಮಗಾರಿಯನ್ನು ಇನ್ನೂ ಪ್ರಾರಂಭಿಸಿಲ್ಲ.

ಆ) ಗುತ್ತಿಗೆದಾರರು ಕೆಲಸವನ್ನು ಪ್ರಾರಂಭಿಸಿಲ್ಲ. ಈ ಬಗ್ಗೆ ಜಾರಿಯಲ್ಲಿರುವ ಕಾನೂನು ರೀತ್ಯಾ ನೋಟೀಸುಗಳನ್ನು ಜಾರಿ ಮಾಡಲಾಗಿದೆ.

ಇ) ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಲು ಈಗ ಒಪ್ಪಿಕೊಂಡಿರುವುದರಿಂದ ಕೆಲಸವು ಶೀಘ್ರದಲ್ಲೇ ಮುಗಿಯುವ ನಿರೀಕ್ಷೆ ಇದೆಯಾದ್ದರಿಂದ ಇನ್ನು ಮುಂದೆ ವಿಳಂಬವಾಗುವ ಸಂಭವವಿಲ್ಲ.

ಈ) ಇಲ್ಲ.

ಉ) ಮೇಲಿನ (ಈ) ಉತ್ತರದಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಬಗ್ಗೆ.

ಪ್ರಶ್ನೆ : 104(343) ಶ್ರೀ ಬಿ. ಬಿ. ಚಿಮ್ಮನಕಟ್ಟಿ(ಬಾದಾಮಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗೆ ಒದಗಿಸಲ್ಪಟ್ಟ ಒಟ್ಟು ಹಣ; (ಯೋಜನಾವಾರು ಸಂಖ್ಯೆಗಳನ್ನು ತಿಳಿಸುವುದು).

ಆ) ಪ್ರತಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆ ಮೇಲೆ 1-1-83 ರಿಂದ 31-3-83 ರವರೆಗೆ ಮತ್ತು 1-4-83 ರಿಂದ 31-12-83ರ ವರೆಗೆ ಖರ್ಚಾದ ಒಟ್ಟು ಹಣ ;

ಇ) 1-4-83 ರಿಂದ 31-12-83ರ ವರೆಗೆ ಭಾರಿ ಮತ್ತು ಮಧ್ಯಮ ಯೋಜನೆಗಳಿಂದ ನೀರಾವರಿ ಸೌಲಭ್ಯಕ್ಕೆ ಒಳಗಾದ ಒಟ್ಟು ಕ್ಷೇತ್ರ ?

ಉತ್ತರ : ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) .— ಅ) ರಾಜ್ಯದ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ನಿಗಧಿ ಮಾಡಿರುವ ಒಟ್ಟು ಹಣ 131.61 ಕೋಟಿ ರೂ ಗಳು. (ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿದೆ).

ಆ) ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 1-1-83 ರಿಂದ 31-3-83ರ ವರೆಗೆ 35.21 ಕೋಟಿ ರೂ.ಗಳು ಮತ್ತು 1-4-83ರ ರಿಂದ 31-12-83ರ ವರೆಗೆ 86.77 ಕೋಟಿ ರೂ.ಗಳು ಖರ್ಚಾಗಿದೆ. (ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿದೆ).

ಇ) 1-4-83 ರಿಂದ 31-12-83ರ ವರೆಗೆ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ 30,621 ಹೆಕ್ಟೇರುಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. (ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿದೆ).